ಓ.ಎಸ್.ನಂ.114/2015

ಡಿ .ಡಬ್ಲ್ಯೂ- 1

ದಿನಾಂಕ: **30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲು:** ವಾದಿ ಪರ ಶ್ರೀ ಎಸ್ ಎನ್ ಆರ್ **ವಕೀಲರಿಂದ**

–

ಡಿಡಿ ಎಲ್ ಆರ್ ನ ನ್ಯಾಯಾಲಯದಲ್ಲಿ ನೀವು ಸಲ್ಲಿಸಿರುವ ಅರ್ಜಿಗೆ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸರ್ವೆ ನಂ.**43** ರಲ್ಲಿ ಆಗಿರುವಂತಹ **1** ರಿಂದ **7** ಪೋಡಿಗಳನ್ನು ರದ್ದು ಮಾಡಿರುತ್ತಾರೆಂದರೆ ಸರಿ. ಹೊಸದಾಗಿ ಮತ್ತೆ ಪೋಡಿ ಮಾಡಲು ಆದೇಶ ಮಾಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಹೊಸದಾಗಿ ಸರ್ವೆ ನಂ.**43** ರಲ್ಲಿ ಯಾವುದೇ ಪೋಡಿ ಮಾಡಿರುವುದಿಲ್ಲ. ತಹಶೀಲ್ದಾರ್ ರವರ ಆದೇಶವನ್ನು ಎ ಸಿ ಕೋರ್ಟನಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಅದರಲ್ಲಿಯೂ ಸಹ ಆದೇಶ ವಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಅರ್ಜಿ ತಿರಸ್ಕರಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಓ ಎಸ್ **114/2015** ಅಂತಿಮ ಆದೇಶಕ್ಕೆ ಒಳಪಟ್ಟು ಮುಕ್ತಾಯಗೊಳಿಸಲಾಗಿರುತ್ತದೆ ಎಂದು ಆದೇಶ ಮಾಡಿರುತ್ತಾರೆಂದರೆ ಸಾಕ್ಷಿ ಅದನ್ನು ತಿರಸ್ಕರಿಸಿರುತ್ತಾರೆಂದು ನುಡಿದಿರುತ್ತಾರೆ.

ವಾದಿಯು ಸಲ್ಲಿಸಿರುವ ದಾವೆಯ ಬಗ್ಗೆ ತಿಳಿದುಕೊಂಡಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯರು ಸಲ್ಲಿಸಿರುವ ದಾಖಲಾತಿಗಳನ್ನು ನೋಡಿರುತ್ತಿರಾ ಎಂದರೆ ಸಾಕ್ಷಿ ಅವರ ಜಮೀನಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ವಾದಿ ಹಾಗೂ ವಾದಿಯ ಹೆಂಡತಿಯವರು ತಲಾ **4** ಎಕರೆ ಜಮೀನನ್ನು ನಾರಾಯಣರಾವ್ ರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಅವರು ಕ್ರಯಕ್ಕೆ ಪಡೆದಿರುವ ಜಮೀನಿಗೂ ನಿಮ್ಮ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನಮ್ಮ ಜಮೀನನ್ನು ಸೇರಿಸಿಕೊಂಡು ದಾವೆ

ಹೂಡಿರುತ್ತಾರೆಂದು ನುಡಿದಿರುತ್ತಾರೆ. ಕ್ರಯಪತ್ರದಲ್ಲಿರುವ ಚಕ್ಕುಬಂದಿಯನ್ನು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದು ಮುಂದುವರಿದು, ಅದರ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದು ನುಡಿದಿರುತ್ತಾರೆ. ಕ್ರಯಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿ ಮೇಲೆ ಸದರಿ ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ಅದರಲ್ಲಿ ವ್ಯತ್ಯಾಸ ಇದೆ ಎಂದು ನುಡಿದಿರುತ್ತಾರೆ. ದಿನಾಂಕಃ **18-10-2008** ರಂದು ವಾದಿಯರು ದಾವ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಅದನ್ನು ದಾಖಲಾತಿ ನೋಡಿ ತಿಳಿದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಪೂರ್ವ ದಿಕ್ಕಿಗೆ ನಿರ್ವಾಣಪ್ಪ ಹಾಗೂ ಮರಳುಪ್ಪನವರ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಉತ್ತರ ದಿಕ್ಕಿಗೆ ಬಲ್ಕಿಸ್ ಬಾನುರವರ ಜಮೀನು ಬರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಡ್ರೈವರ್ ಪರಮೇಶ್ವರಪ್ಪ ಮತ್ತು ಚೀರನಹಳ್ಳಿ ಬಸಣ್ಣನವರ ಜಮೀನು ಬರುತ್ತದೆ ಎಂದರೆ ಸರಿ. ಬಲ್ಕಿಸ್ ಬಾನುರವರ ಜಮೀನಿನ ಉತ್ತರ ದಿಕ್ಕಿಗೆ ಶಂಕರಪ್ಪನವರ ಜಮೀನು ಬರುತ್ತದೆ ಎಂದರೆ ಸರಿ. ಎರಡೂ ಸ್ವತ್ತನ್ನು ಒಂದೇ ದಿನ ವಾದಿಯರು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಅದು ದಾಖಲಾತಿಯಲ್ಲಿ ನೋಡಿ ತಿಳಿದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. **2008** ನೇ ಇಸವಿಯಿಂದ ರೆವಿನ್ಯೂ ದಾಖಲಾತಿಗಳಲ್ಲಿ ವಾದಿಯರ ಹೆಸರು ಇರುತ್ತದೆ ಎಂದರೆ ಸಾಕ್ಷಿ ಅದು ದಾಖಲಾತಿಗಳಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ ದಾವ ಸ್ವತು್ತ ಮೂಲತಃ ರಾಮರಾವ್ ಬಿನ್ ಶ್ರೀನಿವಾಸಯ್ಯರವರದ್ದು ಆಗಿರುತ್ತದೆ ಎಂದರೆ ಸಾಕ್ಷಿ ದಾಖಲಾತಿಯಲ್ಲಿ ಹಾಗೆ ಇರುತ್ತದೆ ಎಂದು ನುಡಿದಿರುತ್ತಾರೆ. ರಾಮರಾವ್ ರವರು ಮವತಿಯಾದ ನಂತರ ಅವರ ಮಗನ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತಿನ ಚಕ್ಕುಬಂದಿ ಸರಿ ಇಲ್ಲದ ವಿಚಾರವಾಗಿ ನಾವು ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇವೆ.

ಒ ಎಸ್ 4/2021 ರಲ್ಲಿ ಚಕ್ಕುಬಂದಿ ತಪ್ಪಾಗಿ ಇರುವ ವಿಚಾರವಾಗಿ ನೀವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿ ಪ್ರಶ್ನಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಪ್ರಶ್ನೆ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ದಿಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನೀವು ಪ್ರತಿವಾದ ಪತ್ರದಲ್ಲಿ ತಿಳಿಸಿರುವ ವಿಚಾರಕ್ಕೂ ಹಾಗೂ ದಾವ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಯಾವುದೇ ಸ್ವತ್ತಿನ ಆಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತನ್ನು ಲಪಾಟಯಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ನಿಮಗೂ ಹಾಗೂ ವಾದಿಯ ದಾವ ಸ್ವತ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮಗೆ ದಾವ ಸ್ವತ್ತಿನ ಮೇಲೆ ಯಾವುದೇ ಹಕ್ಕು ಆಸಕ್ತಿ ಇಲ್ಲದಿದ್ದರೂ ವಾದಿಗಳಿಗೆ ತೊಂದರೆ ಕೊಡುತ್ತಿದ್ದಿರಾ ಎಂದರೆ ಸರಿಯಲ್ಲ. ನೀವು ವಾದಿಗಳಿಗೆ ತೊಂದರೆ ಕೊಡುತ್ತಿರುವ ವಿಚಾರವಾಗಿ ಅವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**